

### ಮ್ಯಾಕ್ಸಿ ಸ್ಕರ್ಟ್‌ಗೆ ಹೂವಿನ ಚಿತ್ತಾರ

ಹೂವಿನ ವಿನ್ಯಾಸವುಳ್ಳ ಸ್ಕರ್ಟ್ ಈಗಿನ ಟ್ರೆಂಡ್. ದೊಡ್ಡ ದೊಡ್ಡ ಹೂವಿನ ಚಿತ್ತಾರದ ಸ್ಕರ್ಟ್‌ಗಳು ಯುವತಿಯರ ಮನ ಕದ್ದಿವೆ. ಇದನ್ನು ಸಾಮಾನ್ಯ ಟಾಪ್, ಕ್ರಾಪ್ ಟಾಪ್, ಟೀ ಶರ್ಟ್ ಎಲ್ಲದರೊಂದಿಗೆ ಮ್ಯಾಚ್ ಮಾಡಿಕೊಳ್ಳುವುದು ಭಿನ್ನ ಲುಕ್ ನೀಡುತ್ತದೆ. 80, 90ರ ದಶಕದಲ್ಲಿ ಹೆಚ್ಚಾಗಿದ್ದ ದೊಡ್ಡ ಹೂವಿನ ಚಿತ್ತಾರದ ಸ್ಕರ್ಟ್‌ಗಳು ಈಗ ಮತ್ತೆ ಮುನ್ನೆಲೆಗೆ ಬಂದಿವೆ. ಗಾಢ ಬಣ್ಣದ ಮೇಲೆ ತಿಳಿ ಬಣ್ಣದ ಹೂವಿನ ಚಿತ್ತಾರ ಹೆಚ್ಚು ಆಕರ್ಷಕವಾಗಿರುತ್ತದೆ. ಬಾಲಿವುಡ್ ನಟಿಯರೂ ಈ ಸ್ಕರ್ಟ್‌ಗಳಿಗೆ ಫಿದಾ ಆಗಿದ್ದಾರೆ. ಕತ್ರಿನಾ ಕೈಫ್, ರಾಶಿ ಖನ್ನಾ, ಪ್ರಿಯಾಂಕಾ ಚೋಪ್ರಾ, ಐಶ್ವರ್ಯಾ ರೈ ಸೇರಿದಂತೆ ಬಹುತೇಕ ನಟಿಯರು ಹೂವಿನ ಚಿತ್ತಾರದ ಸ್ಕರ್ಟ್ ತೊಟ್ಟು ಬೀಗಿದ್ದಾರೆ. ಪಾರ್ಟಿ ಅಥವಾ ಇತರ ಸಮಾರಂಭಗಳಿಗೆ ಹೂವಿನ ಚಿತ್ತಾರದ ಸ್ಕರ್ಟ್ ಹೆಚ್ಚು ಹೊಂದುತ್ತದೆ. ಅದೇ ಬಣ್ಣದ ಅಂತಹದ್ದೇ ವಿನ್ಯಾಸದ ಹ್ಯಾಂಡ್‌ಬ್ಯಾಗ್‌ಗಳು ಕೈಯಲ್ಲಿದ್ದರೆ ಇನ್ನಷ್ಟು ಸ್ಟೈಲಿಷ್ ಆಗಿ ಕಾಣುತ್ತದೆ.

ವಿರುದ್ಧ ಬಣ್ಣದ ಮೇಲುಡುಗೆ ತೊಟ್ಟರೆ ಮತ್ತೂ ಚೆಂದ. ಮೈಗಂಟುವ ಟಾಪ್‌ನೊಂದಿಗೆ ಟ್ಯೂಲೆ ಸ್ಕರ್ಟ್, ಕಾಲಮ್ ಸ್ಕರ್ಟ್ ಹೆಚ್ಚು ಒಪ್ಪುತ್ತದೆ. ಕಚೇರಿಗೆ ಈ ದಿರಿಸು ಹೇಳಿಮಾಡಿಸಿದಂತಿದ್ದು, ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಡೆನಿಮ್ ಶರ್ಟ್‌ನೊಂದಿಗೆ ಮ್ಯಾಕ್ಸಿ ಸ್ಕರ್ಟ್ ಕೂಡ ಉತ್ತಮ ಸಂಯೋಜನೆಯೇ.

ಲೇಯರ್‌ಗಳನ್ನು ಹೊಂದಿರುವ ಲಂಗದೊಂದಿಗೆ ಡೆನಿಮ್ ಜಾಕೆಟ್ ತೊಡುವುದು ಹೆಚ್ಚು ಚಾಲ್ತಿಯಲ್ಲಿದೆ. ಸಭೆ, ಸಮಾರಂಭಗಳಿಗೆ ಗ್ರ್ಯಾಂಡ್ ಲುಕ್ ನೀಡುತ್ತದೆ ಎಂಬುದು ಇದರ ಹಿಂದಿನ ಕಾರಣ. ಕಾಲರ್ ಇರುವ ಶರ್ಟ್, ಸಾಮಾನ್ಯ ಟೀ–ಶರ್ಟ್‌ನೊಂದಿಗೂ ಮ್ಯಾಕ್ಸಿ ಸ್ಕರ್ಟ್ ಮ್ಯಾಚ್ ಆಗುತ್ತದೆ. ಇದು ಸರಳ ಲುಕ್ ನೀಡುತ್ತದೆ. ತುಂಬು ತೋಳಿನ ಟಾಪ್, ಬಲೂನ್ ಟಾಪ್ ಹೀಗೆ ಎಲ್ಲ ಬಗೆಯ ಟಾಪ್‌ಗಳೊಂದಿಗೂ ಮ್ಯಾಕ್ಸಿ ಸ್ಕರ್ಟ್ ಹೊಂದಿಕೊಳ್ಳುತ್ತದೆ. ಜಾಣ್ಮೆಯ ಆಯ್ಕೆ ಇರಬೇಕಷ್ಟೆ.

### ಸೀರೆಗಳಲ್ಲಿ ಸ್ಕರ್ಟ್

ರೇಷ್ಮೆ ಸೀರೆ ಉಟ್ಟು ಸಾಕಾಗಿದ್ದರೆ ಅದನ್ನು ಸ್ಕರ್ಟ್ ಮಾಡಿಕೊಳ್ಳಬಹುದು. ಅದಕ್ಕೊಪ್ಪುವ ಎಂಬ್ರಾಯಿಡರಿ ವರ್ಕ್‌ನ ಟಾಪ್ ಧರಿಸಿದರೆ ಸಾಂಪ್ರದಾಯಿಕ ನೋಟ ದಕ್ಕುತ್ತದೆ. ಲಾಂಗ್ ಸ್ಕರ್ಟ್ ಅನ್ನು ಪಟ್ಟಿ ನೆರಿಗೆ ಇಟ್ಟು ಹೊಲಿಸಿಕೊಳ್ಳಬಹುದು ಅಥವಾ ಮ್ಯಾಕ್ಸಿ ಮಾದರಿಯಲ್ಲಿ ಸೊಂಟದ ಭಾಗ ಬಿಗಿಯಾಗಿಯೂ, ಕೆಳಗೆ ಸಡಿಲವಾಗಿಯೂ ವಿನ್ಯಾಸ ಮಾಡಿಸಬಹುದು. ಯಾವುದೇ ಬಗೆಯ ರೇಷ್ಮೆ ಸೀರೆಯಿಂದ ಈ ಎರಡೂ ಮಾದರಿ ಅತ್ಯುತ್ತಮವಾಗಿ ಮೂಡಿಬರುತ್ತವೆ. ಇಕತ್ ವಿನ್ಯಾಸದ ಸೀರೆಗಳೂ ಇವುಗಳಿಗೆ ಸೂಕ್ತ. ಇದಕ್ಕೆ ವಿರುದ್ಧ ಬಣ್ಣದ ಟಾಪ್ ಅಥವಾ ಜಾಕೆಟ್ ಧರಿಸಿದರಾಯಿತು. ಶಿಫಾನ್, ಜಾರ್ಜೆಟ್‌ನಂತಹ ಸೀರೆಗಳು ಮ್ಯಾಕ್ಸಿಯಂತಹ ಟ್ರೆಂಡಿ ಉಡುಗೆಗೆ ಒಪ್ಪುತ್ತವೆ.

ಪ್ರಿಂಟೆಡ್ ಸ್ಕರ್ಟ್ ಅಥವಾ ಟ್ರಾನ್ಸ್‌ಪರೆಂಟ್ ಸ್ಕರ್ಟ್‌ಗಳು, ಕಾಟನ್ ಸ್ಕರ್ಟ್‌ಗಳು ಕ್ಲಾಸಿ ಲುಕ್ ನೀಡುತ್ತವೆ. ಇವುಗಳಿಗೆ ಲಾಂಗ್ ಕುರ್ತಿ ಬಳಸಬಹುದು. ಬಹುತೇಕರ ಆಯ್ಕೆ ಇದೇ ಆಗಿದೆ. ಎಲ್ಲ ವಯಸ್ಸಿನ ಹೆಣ್ಣುಮಕ್ಕಳಿಗೂ ಈ ಕಾಂಬಿನೇಷನ್ ಹೊಂದುತ್ತದೆ.

### ಸ್ಕರ್ಟ್‌ನೊಂದಿಗೆ ಸ್ಕಾರ್ಫ್, ಜಾಕೆಟ್

ಈಗ ಚಳಿ ಹೆಚ್ಚಿರುವುದರಿಂದ ಸ್ಕರ್ಟ್‌ನೊಂದಿಗೆ ಕ್ರಾಪ್ಡ್ ಜಾಕೆಟ್ ಅಥವಾ ಬ್ಲೇಜರ್ ಧರಿಸಬಹುದು. ಇನ್ನಷ್ಟು ಸ್ಟೈಲಿಷ್ ಆಗಿ ಕಾಣಲು ಹ್ಯಾಟ್ ಬಳಸಬಹುದು. ಸಾಂಪ್ರದಾಯಿಕವಾಗಿ ಕಾಣಿಸಿಕೊಳ್ಳಬೇಕೆಂದರೆ ಸಣ್ಣ ನೆಕ್ಲೇಸ್, ಕಿವಿಯೋಲೆ, ಬಳೆ ತೊಟ್ಟರೆ ಸಾಕು. ಮದುವೆಯಂತಹ ಸಮಾರಂಭಗಳಿಗೆ ಹೇಳಿಮಾಡಿಸಿದಂತಿರುತ್ತವೆ. ಬೇರೆ ರೀತಿಯ ಸ್ಕರ್ಟ್‌ಗಳೊಂದಿಗೆ ಶೂ, ಹೈ ಹೀಲ್ಸ್ ಮ್ಯಾಚ್ ಮಾಡಿಕೊಳ್ಳಬಹುದು.